# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

ಸಂಖ್ಯೆ: A8(NST)/1/2023/ಇ13470 ದಿನಾಂಕ:23.05.2023

**:: ಸುತ್ತೋಲೆ ::**

ವಿಷಯ: - 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಹಾಜರಾತಿ ಕೊರತೆಯಿಂದಾಗಿ ಪರೀಕ್ಷೆಯಿಂದ ಹೊರಗುಳಿದ ವಿದ್ಯಾರ್ಥಿಗಳಿಗೆ ಜೂನ್-2023ರ ಪೂರಕ ಪರೀಕ್ಷೆಯಲ್ಲಿ ಖಾಸಗಿ ಅಭ್ಯರ್ಥಿಯಾಗಿ (CCEPF) ಪರೀಕ್ಷಾ ನೋಂದಣಿಗೆ ಅವಕಾಶ ಕಲ್ಪಿಸಿರುವ ಕುರಿತು.

ಉಲ್ಲೇಖ:-
1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆರವರ ಇಆಫೀಸ್ ಕಡತದ ಅನುಮೋದನೆ ದಿನಾಂಕ:17.05.2023
2. ಈ ಕಛೇರಿ ಅಧಿಸೂಚನೆ ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ. ಅಧಿಸೂಚನೆ/ಮಾರ್ಚ್-23/14/2022-23 ದಿ:17.09.2023.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಕಾಯ್ದೆ-1966 ನಿಯಮ-37ರನ್ವಯ ಶಾಲಾ ವಿದ್ಯಾರ್ಥಿಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಶಾಲೆಯು ಕಾರ್ಯ ನಿರ್ವಹಿಸಲು ನಿಗದಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ. ಈ ಹಿನ್ನಲೆಯಲ್ಲಿ 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ನೋಂದಣಿಸಿಕೊಂಡು, ಹಾಜರಾತಿ ಕೊರತೆಯಿಂದಾಗಿ ರಾಜ್ಯದ್ಯಂತ ಅಂದಾಜು 26,900 ವಿದ್ಯಾರ್ಥಿಗಳ ನೋಂದಣಿಯನ್ನು ಮುಖ್ಯ ಶಿಕ್ಷಕರು ಶಾಲಾ ಹಂತದಲ್ಲಿ ರದ್ದುಪಡಿಸಲಾಗಿರುವ ಸಂಬಂಧ 2022-23ನೇ ಸಾಲಿನ ಮುಖ್ಯ ಪರೀಕ್ಷೆಯಲ್ಲಿ ಈ ವಿದ್ಯಾರ್ಥಿಗಳು ಹಾಜರಾಗಲು ಸಾಧ್ಯವಾಗಿರುವುದಿಲ್ಲ.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಸದರಿ ವಿದ್ಯಾರ್ಥಿಗಳು ಮುಂದಿನ ಉನ್ನತ ಶಿಕ್ಷಣದ ವ್ಯಾಸಂಗದಿಂದ ವಂಚಿತರಾಗದಂತೆ ಕ್ರಮವಹಿಸುವ ಸಲುವಾಗಿ ಇಂತಹ ವಿದ್ಯಾರ್ಥಿಗಳಿಗೆ ಮಾತ್ರ ಜೂನ್-2023ರ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಯಲ್ಲಿ ಖಾಸಗಿ ಅಭ್ಯರ್ಥಿಗಳಾಗಿ (CCEPF) ಪರೀಕ್ಷೆಗೆ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖಿತ-2ರ ಅಧಿಸೂಚನೆಯಲ್ಲಿ ಖಾಸಗಿ ಅಭ್ಯರ್ಥಿಗಳಾಗಿ ನೋಂದಣಿ ಮಾಡಿಕೊಳ್ಳಲು ವಿಧಿಸಿರುವ ಷರತ್ತುಗಳನ್ನು ಈ ಎಲ್ಲಾ ಅರ್ಹ ವಿದ್ಯಾರ್ಥಿಗಳು ಪಾಲಿಸಬೇಕಾಗಿರುತ್ತದೆ. ಜೂನ್-2023ರ ಪೂರಕ ಪರೀಕ್ಷೆಯು ಈ ಅಭ್ಯರ್ಥಿಗಳಿಗೆ ಪ್ರಥಮ ಪ್ರಯತ್ನವಾಗಿದ್ದು, ಉತ್ತೀರ್ಣರಾಗಲು ಈ ಪರೀಕ್ಷೆಯಿಂದ ಸತತ ಆರು ಪ್ರಯತ್ನಗಳ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಅವಕಾಶದ ನಂತರವೂ ಅನುತ್ತೀರ್ಣರಾಗುವ ಅಭ್ಯರ್ಥಿಗಳು ನಂತರದ ಪರೀಕ್ಷೆಯಿಂದ ನಿಯಮಾನುಸಾರ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಎಲ್ಲಾ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳುವುದು. ಈ ವಿದ್ಯಾರ್ಥಿಗಳು ಮಾರ್ಚ್-2023ರ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಈಗಾಗಲೇ ಪರೀಕ್ಷಾ ಶುಲ್ಕ ಪಾವತಿಸಿರುತ್ತಾರೆ. ಆದ್ದರಿಂದ ಜೂನ್-2023ರ ಪೂರಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಲು ನೋಂದಣಿ ಶುಲ್ಕವನ್ನು ಮಾತ್ರ ಪಾವತಿಸತಕ್ಕದ್ದು. ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಲು ಇರುವ ನಿಯಮದಂತೆ ನೋಂದಾಯಿಸಿಕೊಂಡು ಕೆಳಕಂಡ ದಿನಾಂಕದೊಳಗೆ ಆನ್ ಲೈನ್ ಮುಖಾಂತರ ನೋಂದಾಯಿಸಿ ಶುಲ್ಕ ಪಾವತಿಸಲು ತಿಳಿಸಿದೆ.

A8_letter1

Scanned with CamScanner

**ನೋಂದಣಿ ಶುಲ್ಕದ ವಿವರ**

| ಕ್ರ ಸಂ | ವಿವರ | ಶುಲ್ಕದ ವಿವರ ರೂ ಗಳಲ್ಲಿ |
|---|---|---|
| 01 | ಮಾರ್ಚ್-2023ರ ಮುಖ್ಯ ಪರೀಕ್ಷೆಗೆ ನೋಂದಾಯಿಸಿಕೊಂಡು ಹಾಜರಾತಿ ಕೊರತೆ ಇರುವ ಕಾರಣ ಜೂನ್-2023ರ ಪೂರಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ (CCEPF) ಹಾಜರಾಗಲು ನೋದಣಿ ಶುಲ್ಕ ಹಾಗೂ ಅರ್ಜಿ ಶುಲ್ಕ | ರೂ.205/- (ಪ್ರತಿ ವಿದ್ಯಾರ್ಥಿಗೆ) |

**ನೋಂದಣಿಗೆ ಮತ್ತು ಪರೀಕ್ಷಾ ಶುಲ್ಕ ಪಾವತಿಗೆ ನಿಗಧಿಪಡಿಸಿದ ದಿನಾಂಕ**

| ಕ್ರ ಸಂ | ವಿವರ | ನಿಗಧಿಪಡಿಸಿದ ದಿನಾಂಕ |
|---|---|---|
| 01 | ಮಾರ್ಚ್-2023ರ ಮುಖ್ಯ ಪರೀಕ್ಷೆಗೆ ನೋಂದಾಯಿಸಿಕೊಂಡು ಹಾಜರಾತಿ ಕೊರತೆಯಿಂದಾಗಿ ಜೂನ್-2023ರ ಪೂರಕ ಪರೀಕ್ಷೆಗೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳ (CCEPF) ನೋಂದಣಿ ಮತ್ತು ಆನ್ ಲೈನ್ ಮುಖಾಂತರ ವಿವರಗಳನ್ನು ಅಪ್ ಲೋಡ್ ಮಾಡುವುದು | ದಿನಾಂಕ:23.05.2023 ರಿಂದ 26.05.2023ರ ಸಂಜೆ 5.30 ರವರೆಗೆ |
| 02 | NEFT ಚಲನ್ ಮೂಲಕ ಬ್ಯಾಂಕ್ ಗೆ ಶುಲ್ಕ ಪಾವತಿಸುವುದು | ದಿನಾಂಕ:27.05.2023 ರಿಂದ 29.05.2023 |

**ಸೂಚನೆ:-** ನೋಂದಣಿ ಶುಲ್ಕವನ್ನು ಈ ಸುತ್ತೋಲೆಯೊಂದಿಗೆ ಅನುಬಂಧಿಸಿರುವ ಮಂಡಲಿಯ NEFT ಚಲನ್ ನಲ್ಲಿ ಭರ್ತಿಮಾಡಿ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಜಮೆ ಮಾಡಿ ಮೂಲ ಪ್ರತಿ ಮತ್ತು ನಾಮಿನಲ್ ರೋಲ್ ನ್ನು ಸಂಬಂಧಪಟ್ಟ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳಿಗೆ **ದಿನಾಂಕ:30.05.2023ರೊಳಗೆ** ತಲುಪುವಂತೆ ಕಳುಹಿಸತಕ್ಕದ್ದು. NEFT ಚಲನ್ ನಲ್ಲಿ Beneficiary A/c Number ಕೆಳಕಂಡ ಉದಾಹರಣೆಯಂತೆ ನಮೂದಿಸುವುದು.

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 1 | 4 | 9 | 5 | 9 | P | F | 0 | 0 | 0 | 0 | A | X | 0 | 0 | 1 | 8 | S | 1 | 3 |

**AX0018 ಎನ್ನುವುದು ಶಾಲಾ ಸಂಕೇತವಾಗಿರುತ್ತದೆ. ಸದರಿ ಖಾಲಂನಲ್ಲಿ ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಶಾಲೆಯ ಶಾಲಾ ಸಂಕೇತವನ್ನು ಮಾತ್ರ ನಮೂದಿಸುವುದು. ಉಳಿದಂತೆ ಚಲನ್ ನಲ್ಲಿ ಯಾವುದೇ ಬದಲಾವಣೆ ಮಾಡತಕ್ಕದಲ್ಲ.**

ಮೇಲ್ಕಂಡ ಅಂಶಗಳ ಕುರಿತು ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ ಮುಖ್ಯೋಪಾದ್ಯಾಯರ ಮುಖಾಂತರ ವಿದ್ಯಾರ್ಥಿಗಳ / ಪೋಷಕರ ಗಮನಕ್ಕೆ ತಂದು ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಲು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಲು ಈ ಮೂಲಕ ಸೂಚಿಸಿದೆ. ಅಂತಿಮ ದಿನಾಂಕದ ನಂತರ ನೋಂದಣಿಗೆ ಅವಕಾಶವಿರುವುದಿಲ್ಲ, ಒಂದು ವೇಳೆ ಅಂತಿಮ ದಿನಾಂಕದ ನಂತರವೂ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾದ್ಯಾಯರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸ್ಪಷ್ಟಪಡಿಸಿದೆ.

(ಮಾನ್ಯ ಅಧ್ಯಕ್ಷರಿಂದ ಅನುಮೋದಿಸಲ್ಪಟ್ಟಿದೆ)

23/5/23

(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು, ಪರೀಕ್ಷೆಗಳು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಸೂಕ್ತ ಕ್ರಮ್ಮಕಾಗಿ.

A8_letter1

Scanned with CamScanner

2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮ್ಮಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಮುಂದಿನ ಸೂಕ್ತ ಕ್ರಮ್ಮಕಾಗಿ (ಸಂಬಂಧಪಟ್ಟ ಬಿಇಓ ರವರ ಮುಖಾಂತರ)
4. ಶಾಖಾಧಿಕಾರಿಗಳು, ಗಣಕಶಾಖೆರವರಿಗೆ ಕಳುಹಿಸುತ್ತಾ, ಮಂಡಳಿ ಜಾಲತಾಣ ಮತ್ತು ಶಾಲಾ ಲಾಗಿನ್ ನಲ್ಲಿ ಪ್ರಕಟಿಸಲು ಮತ್ತು ಮುಂದಿನ ಅಗತ್ಯ ಕ್ರಮಗ್ಯೆಗೊಳ್ಳಲು ತಿಳಿಸಿದೆ.
5. ಮಂಡಳಿಯ ಎಲ್ಲಾ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳಿಗೆ ಮತ್ತು ಶಾಖಾಧಿಕಾರಿಗಳು "ಸಿ" ಶಾಖೆಗೆ ಮುಂದಿನ ಸೂಕ್ತ ಕ್ರಮ್ಮಕಾಗಿ.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು, ಕ.ಶಾ.ಪ.ಮೌ.ಮಂಡಲಿ, ಬೆಂಗಳೂರುರವರ ಆಪ್ತ ಶಾಖೆಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ



Scanned with CamScanner

## BANK COPY

(For SSLC Exam Related Services Only)
(Union Bank of India branches have to use CMS menu and Client Code is KSE4959)

## NEFT CHALLAN

(National Electronic Fund Transfer)

| | |
|---|---|
| Name of the Bank & Branch | |
| Name of the Beneficiary | **Director, (Exams) Karnataka Secondary Education Examination Board, Malleswaram, Bangalore-3.** |
| Beneficiary Bank & Branch | **Union Bank of India, FCS Branch, 21/1, Mission Road, Bangalore-560 027** |
| IFSC Code: | **UBIN0996335** |
| Type of A/c: | **Savings Bank** |

**Beneficiary A/c Number**

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 1 | 4 | 9 | 5 | 9 | P | F | 0 | 0 | 0 | 0 | | | | | | | S | 1 | 3 |

| | |
|---|---|
| Amount: | Rs. (in words ) |
| Date of Deposit: | |
| Name of the Remitting Person/ School, Code & Address: | |
| Purpose of Fee Remitted: | |
| To be filled in by Bank Ref / TSL No. with Bank Seal | |

**INSTRUCTIONS TO THE REMITTER**

01. Beneficiary Account Number 15 Digits to be filled by remitter.

02. If code numbers are less than 12 digits then prefix zero

Example : For Students - if Registration no is 20200155306, then write 020200155306

For Schools - if School Code is AN0016, then write 000000AN0016

For Teachers - Mention your 12 digits AE Code

03. 18th box is always 'S', For 19th and 20th digits - write Purpose Code of fee.

## REMITTER COPY

(For SSLC Exam Related Services Only)
(Union Bank of India branches have to use CMS menu and Client Code is KSE4959)

## NEFT CHALLAN

(National Electronic Fund Transfer)

| | |
|---|---|
| Name of the Bank & Branch | |
| Name of the Beneficiary | **Director, (Exams) Karnataka Secondary Education Examination Board, Malleswaram, Bangalore-3.** |
| Beneficiary Bank & Branch | **Union Bank of India, FCS Branch, 21/1, Mission Road, Bangalore-560 027** |
| IFSC Code: | **UBIN0996335** |
| Type of A/c: | **Savings Bank** |

**Beneficiary A/c Number**

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 1 | 4 | 9 | 5 | 9 | P | F | 0 | 0 | 0 | 0 | | | | | | | S | 1 | 3 |

| | |
|---|---|
| Amount: | Rs. (in words ) |
| Date of Deposit: | |
| Name of the Remitting Person/ School, Code & Address: | |
| Purpose of Fee Remitted: | |
| To be filled in by Bank Ref / TSL No. with Bank Seal | |

**ಪಾವತಿದಾರರಿಗೆ ಸೂಚನೆಗಳು :**

1. Beneficiary A/C Number 15 ಅಂಕಿಗಳನ್ನು ನಮೂದಿಸಬೇಕು. (ನೋಂದಣಿ ಸಂಖ್ಯೆ/ಶಾಲಾ ಸಂಕೇತ/AE ಕೋಡ್) ನೋಂದಣಿ ಸಂಖ್ಯೆ 12 ಅಂಕಿಗಳಿಗಿಂತ ಕಡಿಮೆ ಇದ್ದರೆ, ಆ ಸಂಖ್ಯೆಯ ಹಿಂದೆ ಸೊನ್ನೆ ಸೇರಿಸಿ.
   ಉದಾಹರಣೆ: 1) ವಿದ್ಯಾರ್ಥಿಗಳು- ನೋಂದಣಿ ಸಂಖ್ಯೆ 20120155306 ಇದ್ದಲ್ಲಿ 020120155306 ಎಂದು ನಮೂದಿಸಿ.
   2) ಶಾಲೆಗಳು-ಶಾಲಾ ಸಂಕೇತ AN0016 ಇದ್ದಲ್ಲಿ, 000000AN0016 ಎಂದು ನಮೂದಿಸಿ.
   3) ಶಿಕ್ಷಕರು ತಮ್ಮ 12 ಅಂಕಿಗಳ AE ಕೋಡ್ ನಮೂದಿಸಬೇಕು.
2. 18 ನೇ ಅಂಕಿ ಯಾವಾಗಲು 'S' ಎಂದು ಮೊದಲೇ ಮುದ್ರಿತವಾಗಿದೆ. ಇದರ ಮುಂದೆ 19 ಮತ್ತು 20ನೇ ಅಂಕಿಯಾಗಿ ಶುಲ್ಕ ಪಾವತಿಯ ಉದ್ದೇಶದ ಕೋಡ್ ನಮೂದಿಸಿ. (ವಿವಿಧ ಶುಲ್ಕಗಳ ಪಾವತಿಯ ಉದ್ದೇಶಗಳ ಕೋಡ್ ತಿಳಿಯಲು ಚಲನ್ ಹಿಂಭಾಗದಲ್ಲಿ ಮುದ್ರಿಸಿರುವ ಮಾಹಿತಿಯನ್ನು ಗಮನಿಸಿ.)

Scanned with CamScanner